## ಕಾರ್ಯದರ್ಶಿಗಳು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಲಬುರಗಿರವರ ನಡುವಳಿಕೆಗಳು

ವಿಷಯ:- ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ವ್ಯಾಪ್ತಿಯಲ್ಲಿ ಬರುವ ವಿವಿಧ ಇಲಾಖೆಗಳ ದೂರಿನ ಕಾಮಗಾರಿಗಳ ಬಗ್ಗೆ ಪರಿಶೀಲನೆ ಸಮಿತಿ ರಚಿಸುವ ಕುರಿತು.

*******

ಪ್ರಸ್ತಾವನೆ:-

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅನುದಾನದಿಂದ ಕಲ್ಯಾಣ ಕರ್ನಾಟಕ ಭಾಗದ 07 ಜಿಲ್ಲೆಗಳಲ್ಲಿ ಸುಮಾರು 50 ತಾಲೂಕುಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳು ಕೈಗತ್ತಿಗೊಳ್ಳಲಾಗುತ್ತಿರುತ್ತದೆ. ಸದರಿ ಕಾಮಗಾರಿಗಳ ಪ್ರಮಾಣ ಮತ್ತು ಗುಣಮಟ್ಟಗಳನ್ನು ಪರಿಶೀಲಿಸಲು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ 3ನೇ ತಪಾಸನಾ ತಂಡ ಕಾರ್ಯನಿರ್ವಹಿಸುತ್ತಿದೆ. ಆದಾಗ್ಯೂ ಕಾಮಗಾರಿಗಳ ಕಳಪೆ ಅನುಷ್ಠಾನ ಹಾಗೂ ವಿಳಂಬಕ್ಕೆ ಸಂಬಂಧಿಸಿದಂತೆ ಹಲವಾರು ದೂರುಗಳು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಸ್ವೀಕೃತವಾಗುತ್ತಿರುತ್ತವೆ. ಈ ಹಿನ್ನಲೆಯಲ್ಲಿ ಸದರಿ ದೂರುಗಳನ್ನು ಜಿಲ್ಲಾ ಹಂತದಲ್ಲಿಯೇ ನಿಗಧಿತ ಸಮಯದೊಳಗೆ ಇತ್ಯರ್ಥ ಪಡಿಸಲು ಈ ಕೆಳಕಂಡಂತೆ **ದೂರು ನಿರ್ವಹಣಾ ಸಮಿತಿ** ರಚಿಸುವುದು ಅತ್ಯಗತ್ಯವಾಗಿರುತ್ತದೆ.

### ಆದೇಶ

ದಿನಾಂಕ:11.07.2023

ಕ್ರ.ಸಂ:ಕ.ಕ.ಪ್ರ.ಅ.ಮಂ/ತಾಶಾ/2023-24/1535

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅನುದಾನದಿಂದ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಕೈಗೊಳ್ಳಲಾಗುತ್ತಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದ ದೂರುಗಳನ್ನು ಜಿಲ್ಲಾ ಹಂತದಲ್ಲಿಯೇ ನಿಗಧಿತ ಸಮಯದೊಳಗೆ ಇತ್ಯರ್ಥ ಪಡಿಸಲು ಈ ಕೆಳಕಂಡಂತೆ **ದೂರು ನಿರ್ವಹಣಾ ಸಮಿತಿ** ರಚಿಸಿ ಆದೇಶಿಸಿದೆ.

| ಕ್ರ.ಸಂ | ಅಧಿಕಾರಿಗಳ ವಿವರ | ಪದನಾಮ | ದೂರು ನಿರ್ವಹಿಸಬೇಕಾದ ಇಲಾಖೆಗಳ ವಿವರ |
|---|---|---|---|
| 1 | ಜಿಲ್ಲಾಧಿಕಾರಿಗಳು | ಅಧ್ಯಕ್ಷರು | KRIDL, PRED, RWS & PMGSY |
| 2 | ಅಪರ ಜಿಲ್ಲಾಧಿಕಾರಿಗಳು | ಉಪಾಧ್ಯಕ್ಷರು | |
| 3 | ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಗುಣ ಭರವಸೆ ವಿಭಾಗ | ಸದಸ್ಯರು | |
| 4 | ಜಿಲ್ಲಾಧಿಕಾರಿಗಳ ರವರಿಂದ ನಾಮನಿರ್ದೇಶನಗೊಂಡ ತಾಂತ್ರಿಕ ತಜ್ಞರು. | ಸದಸ್ಯರು | |
| 5 | ತಾಂತ್ರಿಕ ಸಲಹೆಗಾರರು, ಜಿಲ್ಲಾಧಿಕಾರಿಗಳ ಕಾರ್ಯಾಲಯ (KKRDB ಕೋಶ) | ಸದಸ್ಯ ಕಾರ್ಯದರ್ಶಿಗಳು | |
| 1 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ | ಅಧ್ಯಕ್ಷರು | PWD, NK, DHO, MI & CMC |
| 2 | ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ | ಉಪಾಧ್ಯಕ್ಷರು | |
| 3 | ಕಾರ್ಯಪಾಲಕ ಅಭಿಯಂತರರು, ಪಂಚಾಯತ ರಾಜ ಇಂಜಿನಿಯರಿಂಗ ಇಲಾಖೆ, ಗುಣ ಭರವಸೆ ವಿಭಾಗ | ಸದಸ್ಯರು | |
| 4 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ನಾಮನಿರ್ದೇಶನಗೊಂಡ ತಾಂತ್ರಿಕ ತಜ್ಞರು | ಸದಸ್ಯರು | |
| 5 | ತಾಂತ್ರಿಕ ಸಲಹೆಗಾರರು, ಜಿಲ್ಲಾಧಿಕಾರಿಗಳ ಕಾರ್ಯಾಲಯ (KKRDB ಕೋಶ) | ಸದಸ್ಯ ಕಾರ್ಯದರ್ಶಿಗಳು | |

ಈ ಮೇಲ್ಕಂಡ ದೂರು ನಿರ್ವಾಹಣಾ ಸಮಿತಿಯು ದೂರು ಸ್ವೀಕೃತವಾದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಈ ಕೆಳಗಿನಂತೆ ಕ್ರಮ ಕೈಗೊಳ್ಳಲು ಸೂಚಿಸಿದೆ.

- ದೂರು ಸ್ವೀಕೃತವಾದ 03 ದಿನಗಳ ಒಳಗೆ ಸ್ಥಳ ಪರಿಶೀಲನೆ, ಗುಣ ಭರವಸೆ ಪರೀಕ್ಷೆಗಳು ಇತರೆ ಅಗತ್ಯ ದಾಖಲಾತಿಗಳನ್ನು ಪರಿಶೀಲಿಸಿ ಸಮಗ್ರ ವರದಿ ಸಲ್ಲಿಸುವುದು.
- ಕಾಮಗಾರಿಗಳ ಸ್ಥಳ ಪರಿಶೀಲನೆ, ಗುಣ ಭರವಸೆ ಪರೀಕ್ಷೆ, ತಾಂತ್ರಿಕ ಸಲಹಾ ಶುಲ್ಕ ಇತರೆ ಅಗತ್ಯ ವೆಚ್ಚಗಳನ್ನು ಆಡಳಿತಾತ್ಮಕ ವೆಚ್ಚದಲ್ಲಿ ಭರಿಸಬಹುದಾಗಿದೆ.



Scanned with OKEN Scanner

➢ ಸದರಿ ದೂರು ನಿರ್ವಹಣಾ ಸಮಿತಿ ರಚನೆಯ ವಿವರಗಳನ್ನು ಸಾರ್ವಜನಿಕರಿಗೆ ತಿಳಿಸಲು ಆಯಾ ಜಿಲ್ಲೆಯ ವೆಬಸೈಟ್ ಹಾಗೂ ಪತ್ರಿಕಾ ಪ್ರಕಟಣೆಯ ಮೂಲಕ ಪ್ರಚಾರ ನೀಡುವುದು.

ಈ ಮೇಲ್ಕಂಡಂತೆ ರಚಿಸಲಾದ ದೂರು ನಿರ್ವಹಣಾ ಸಮಿತಿಯು ಆಯಾ ಜಿಲ್ಲೆಗಳಲ್ಲಿ ಸಭೆಗಳನ್ನು ನಡೆಸಿ ಸ್ವೀಕೃತವಾದ ದೂರುಗಳ ಹಾಗೂ ಇತ್ಯರ್ಥ ಪಡಿಸಲಾದ ದೂರುಗಳ ಮಾಹಿತಿಯನ್ನು ಹಾಗೂ ಅನುಪಾಲನಾ ವರದಿಗಳನ್ನು ದಿನಾಂಕ:15.07.2023ರ ಒಳಗೆ ಸಲ್ಲಿಸಲು ತಿಳಿಸಿದೆ. ಅನುಪಾಲನಾ ವರದಿ ನೀಡಲು ವಿಫಲರಾದ ಜಿಲ್ಲೆಗಳ ಕ.ಕ.ಪ್ರ.ಅ.ಮಂಡಳಿ ಕೋಶದ ಸಿಬ್ಬಂದಿಗಳ ವಿರುದ್ದ ಶಿಸ್ತುಕ್ರಮ ಜರುಗಿಸಲಾಗುವುದು.

11.7.23

ಕಾರ್ಯದರ್ಶಿಗಳು
ಕ.ಕ.ಪ್ರ.ಅ.ಮಂಡಳಿ, ಕಲಬುರಗಿ.

ಇವರಿಗೆ,

1. ಜಿಲ್ಲಾಧಿಕಾರಿಗಳು, ಕಲಬುರಗಿ/ಯಾದಗಿರ/ಬೀದರ/ರಾಯಚೂರು/ಕೊಪ್ಪಳ/ಬಳ್ಳಾರಿ ಹಾಗೂ ವಿಜಯನಗರ ರವರ ಸೂಕ್ತ ಕ್ರಮಕ್ಕಾಗಿ.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಕಲಬುರಗಿ/ಯಾದಗಿರ/ಬೀದರ/ ರಾಯಚೂರು/ಕೊಪ್ಪಳ/ಬಳ್ಳಾರಿ ಹಾಗೂ ವಿಜಯನಗರ ರವರ ಸೂಕ್ತ ಕ್ರಮಕ್ಕಾಗಿ.
3. ಸಂಬಂಧಪಟ್ಟವರಿಗೆ ಅನುಪಾಲನೆಗಾಗಿ.

Scanned with OKEN Scanner

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಾರ್ಯಾಲಯ
ಜಿಲ್ಲಾ ಪಂಚಾಯತ್ ವಿಜಯನಗರ ಜಿಲ್ಲೆ
ಜಿಲ್ಲಾಧಿಕಾರಿಗಳ ಕಛೇರಿ ಕಟ್ಟಡ
ಟಿ.ಬಿ.ಡ್ಯಾಂ ರಸ್ತೆ ಹೊಸಪೇಟೆ-583225
Email:ceozpvijayanagara@gmail.com ಗ್ರಾಮೀಣಾಭಿವೃದ್ಧಿ & ಪಂಚಾಯತ್ ರಾಜ್ ಇಲಾಖೆ

Office of the Chief Executive officer
ZillaPanchayathVijayanagara District
DC Office Building
T.B Dam Road Hospet-583225

## ನಡವಳಿ

**ವಿಷಯ:** ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಯೋಜನೆಯ ವ್ಯಾಪ್ತಿಯಲ್ಲಿ ಬರುವ ವಿವಿಧ ಇಲಾಖೆಗಳ ದೂರಿನ ಕಾಮಗಾರಿಗಳ ಬಗ್ಗೆ ಪರಿಶೀಲನ ಸಮಿತಿ ರಚಿಸಿದ ವರದಿ ಸಲ್ಲಿಸುವ ಕುರಿತು.

**ಉಲ್ಲೇಖ:-** 1.ಮಾನ್ಯ ಕಾರ್ಯದರ್ಶಿಗಳು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಕಲಬುರಗಿ ಇವರ ಕಾರ್ಯಾಲಯದ ನಡವಳಿ ಆದೇಶ ಪತ್ರ ಕ್ರ.ಸಂ. ಕ.ಕ.ಪ್ರ.ಅ.ಮಂ./ತಾ.ಶಾ./2023-24 /1535 ದಿನಾಂಕ 11-7-2023.

@@@@@

ಮೇಲ್ಕಾಣಿಸಿದ ವಿಷಯಕ್ಕೆ ಹಾಗೂ ಉಲ್ಲೇಖಕ್ಕೆ ಸಂಬಂದಿಸಿದಂತೆ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ವಿಜಯನಗರ ಜಿಲ್ಲಾ ಪಂಚಾಯತಿ ಹಂತದಲ್ಲಿ ದೂರು ನಿರ್ವಹಿಸಬೇಕಾದ ಇಲಾಖೆಗಳಾದ **pwd,NK. Dho. MI & CMC** ಇವುಗಳಿಗೆ ಸಂಬಂದಿಸಿದಂತೆ ಮಾನ್ಯ ಕಾರ್ಯದರ್ಶಿಗಳು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಕಲಬುರಗಿ ಇವರ ಆದೇಶದಂತೆ **ದೂರು ನಿರ್ವಹಣಾ ಸಮಿತಿ** ರಚಿಸಲು ಸೂಚಿಸಿದ ಪ್ರಯುಕ್ತ ಕೆಳಗಿನಂತೆ ಆದೇಶ.

## ಆದೇಶ

ಸಂ:ಜಿ.ಪಂ.ವಿ/ಕೆ.ಕೆ.ಆರ್.ಡಿ.ಬಿ./ಕಾ.ದೂ.ಪ.ಸಮಿತಿ1/2023-24 ದಿನಾಂಕ; 12 -7-2023.

| ಕ್ರ.ಸಂ. | ಅಧಿಕಾರಿಗಳ ವಿವರ | ಪದನಾಮ |
|---|---|---|
| 1. | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತಿ ವಿಜಯನಗರ. | ಅಧ್ಯಕ್ಷರು |
| 2. | ಮುಖ್ಯ ಯೋಜನಾಧಿಕಾರಿಗಳು ಜಿಲ್ಲಾ ಪಂಚಾಯತಿ ವಿಜಯನಗರ. | ಉಪಾಧ್ಯಕ್ಷರು |
| 3. | ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ,ಗುಣ ಭರವಸೆ ವಿಭಾಗ. (ಕಲಬುರಗಿ EE-PRED) | ಸದಸ್ಯರು |
| 4. | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ನಾಮನಿರ್ದೇಶನಗೊಂಡ ತಾಂತ್ರಿಕ ತಜ್ಞರು ( ಸಿವಿಲ್ ವಿಭಾಗದ ಮುಖ್ಯಸ್ಥರು ಪ್ರೌಢದೇವರಾಯ ತಾಂತ್ರಿಕ ಮಹಾ ವಿಧ್ಯಾಲಯ ಹೊಸಪೇಟೆ ವಿಜಯನಗರ) | ಸದಸ್ಯರು |
| 5. | ತಾಂತ್ರಿಕ ಸಲಹೆಗಾರರು ,ಜಿಲ್ಲಾಧಿಕಾರಿಗಳ ಕಾರ್ಯಾಲಯ ವಿಜಯನಗರ (KKRDB) ಕೋಶ. | ಸದಸ್ಯ ಕಾರ್ಯದರ್ಶಿ |

ಮೇಲಿನಂತೆ ದೂರು ನಿರ್ವಹಣಾ ಸಮಿತಿ ರಚಿಸಲಾಗಿದ ಹಾಗೂ ತಮ್ಮ ದಯಾಪರ ಅವಾಗಾಹನೆಗಾಗಿ ಸಲ್ಲಿಸಲಾಗಿದೆ.

**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು**
**ಜಿಲ್ಲಾ ಪಂಚಾಯತಿ ವಿಜಯನಗರ**

**ಇವರಿಗೆ,**

1 ಉಪಕಾರ್ಯದರ್ಶಿಗಳು ಜಿಲ್ಲಾ ಪಂಚಾಯತಿ ವಿಜಯನಗರ ಇವರಿಗೆ ಮಾಹಿತಿ & ಮುಂದಿನ ಕ್ರಮಕ್ಕಾಗಿ.
2. ಮುಖ್ಯ ಯೋಜನಾಧಿಕಾರಿಗಳು ಜಿಲ್ಲಾ ಪಂಚಾಯತಿ ವಿಜಯನಗರ ಇವರಿಗೆ ಮಾಹಿತಿ & ಮುಂದಿನ ಕ್ರಮಕ್ಕಾಗಿ.
3. ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ,ಗುಣ ಭರವಸೆ ವಿಭಾಗ. (ಕಲಬುರಗಿ EE-PRED) ಇವರಿಗೆ ಮಾಹಿತಿ & ಮುಂದಿನ ಕ್ರಮಕ್ಕಾಗಿ.
4. ಪ್ರಾಂಶುಪಾಲರು ಪ್ರೌಢದೇವರಾಯ ತಾಂತ್ರಿಕ ಮಹಾ ವಿಧ್ಯಾಲಯ ಹೊಸಪೇಟೆ ವಿಜಯನಗರ,ಇವರಿಗೆ ಮಾಹಿತಿ & ಮುಂದಿನ ಕ್ರಮಕ್ಕಾಗಿ.
5. ತಾಂತ್ರಿಕ ಸಲಹೆಗಾರರು ,ಜಿಲ್ಲಾಧಿಕಾರಿಗಳ ಕಾರ್ಯಾಲಯ ವಿಜಯನಗರ (KKRDB) ಕೋಶ ಇವರಿಗೆ ಅಗತ್ಯ ಕ್ರಮಕ್ಕಾಗಿ .
6. ವಿಷಯ ನಿರ್ವಾಹಕರು ವಿಜಯನಗರ KKRDB ಕೋಶ ಜಿಲ್ಲಾ ಪಂಚಾಯತಿ ವಿಜಯನಗರ ಇವರಿಗೆ ಮುಂದಿನ ಕ್ರಮಕ್ಕಾಗಿ.

**ಪ್ರತಿಯನ್ನು**:-

ಮಾನ್ಯ ಕಾರ್ಯದರ್ಶಿಗಳುಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಕಲಬುರಗಿ ಇವರಿಗೆ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.

Scanned with OKEN Scanner